ತನ್ನ ಸುಪರ್ದಿಗೆ ತೆಗೆದುಕೊಂಡು ಬಿಟ್ಟಳು ಸ್ವಪ್ನ.

ಹಾಗೆ ಕೌಶಿಕನಿಗೆ ಚಿಕಿತ್ಸೆ ಆರಂಭಿಸಿದ ವೈದ್ಯೆ ಸ್ವಪ್ನಳು ತಾನು ಮಾಡಿದ ಮೊದಲ ಕೆಲಸವೆಂದರೆ, ಕೌಶಿಕನನ್ನು ತಕ್ಷಣವೇ ಮತ್ತೆ ಮೊದಲಿದ್ದ ಸ್ಪೆಷಲ್ ವಾರ್ಡ್‌ಗೆ ಶಿಫ್ಟ್ ಮಾಡಿಸಿದ್ದು, ನಂತರ ಮಗುವಿನ ತಾಯಿ ಕುಮುದಳ ಬೆನ್ನು ಸವರಿ 'ನಾನಿದ್ದೇನೆ' ಎಂಬಂತಹ ಸಾಂತ್ವನ ನೀಡಿದ್ದು. ಡಾ. ಸ್ವಪ್ನ ಆ ಆಸ್ಪತ್ರೆಯಲ್ಲಿರುವ ಸುದ್ದಿ ಐಸಿಯು ಅಲ್ಲಿದ್ದ ಮಗುವನ್ನು ಮತ್ತೆ ಸ್ಪೆಷಲ್ ವಾರ್ಡ್‌ಗೆ ಶಿಫ್ಟ್ ಮಾಡಿಸಿದ್ದಾಳೆ ಎಂಬ ಸುದ್ದಿ ವೈಟಿಂಗ್ ಲಾಂಜ್‌ನಲ್ಲಿದ್ದ ಅಕ್ಷಯಕುಮಾರನಿಗೆ ಸಿಕ್ಕಿದೊಡನೆ ಆತ ವಾರ್ಡಿಗೆ ಅವಸರವಸರವಾಗಿ ನುಗ್ಗಿದ್ದ. ವಾರ್ಡಿಗೆ ಬಂದ ಅಕ್ಷಯನನ್ನು ಕಂಡೊಡನೆ ಇನ್ನಿಲ್ಲದ ಆತ್ಮೀಯತೆ, ಸಂಭ್ರಮ ಹಾಗೂ ಖುಷಿಯಿಂದ ಮಾತನಾಡಿಸಿದ ಸ್ವಪ್ನ, ಮಾತಿನ ನಡುವೆ 'ಈಗ ನಿಂದು ಬಾಳ ಕಾರುಭಾರಂತೆ ಮಾರಾಯ... ನಂಗೆ ನಿನ್ನ ಮಗನು ಈಗ ಎಲ್ಲ ಹೇಳಿದ' ಎಂದು ಅಂದವಳೇ ಮೆಲು ನಗುತ್ತ ಆತನ ತಲೆಗೊಂದು ತಟ್ಟನೆ... ಮೆಲ್ಲಗೆ ಮೊಟಕಿದ್ದಳು.

ಕೌಶಿಕನ ತಂದೆ ಅಕ್ಷಯಕುಮಾರ, ಸ್ವಪ್ನ ಹೆಗಡೆಯ ಸಹಪಾಠಿ ಮಾತ್ರವಲ್ಲ; ಆಕೆಯ ತಂದೆಯ ದೊಡ್ಡಪ್ಪನ ಮಗನ ಮಗನೂ ಹೌದು. ಸಂಬಂಧದಲ್ಲಿ ಅಣ್ಣನಾದರೂ ಆಕೆ ಆತನನ್ನು ಕರೆಯುವುದು 'ಅಚ್ಚು' ಎಂದೇ. ಅವರಿಬ್ಬರೂ ಏಳನೇ ತರಗತಿವರೆಗೆ ಒಂದೇ ಶಾಲೆಯಲ್ಲಿ ಕಲಿತವರು. ಆದರೆ ಅಕ್ಷಯಕುಮಾರನಿಗೆ ಚಿಕ್ಕಂದಿನಿಂದಲೂ ಸ್ವಪ್ನನನ್ನು ಕಂಡರೆ ಏನೋ ಭಯ, ಏನೋ ಕೀಳರಿಮೆ. ಜೀರಿಗೆಮೆಣಸಿನಷ್ಟು ಚುರುಕಿರುವ ಆಕೆಯಿಂದ ಸದಾ ದೂರವಿರಲು ಪ್ರಯತ್ನಿಸಿದರೂ, ಆಕೆಯೇ ಆತನನ್ನು ಮೊಟಕಿ ಮಾತಿಗೆಳೆದು ರೇಗಿಸಿ... ರೊಚ್ಚಿಗೆಬ್ಬಿಸುತ್ತಿದ್ದಳು. ಸ್ವಪ್ನನ ಅಪ್ಪನಿಗೆ ಊರಿಂದ ಊರಿಗೆ ವರ್ಗಾವಣೆ ಆಗುತ್ತಿದ್ದುದರಿಂದ ಏಳನೇ ಕ್ಲಾಸಿನ ನಂತರದಲ್ಲಿ ಅವರಿಬ್ಬರೂ ಸೇರುತ್ತಿದ್ದುದು ಕುಟುಂಬದ ಕಾರ್ಯಕ್ರಮಗಳಲ್ಲಿ ಮಾತ್ರವೇ; ಅದೂ ಅಪರೂಪದಲ್ಲಿ ಅಪರೂಪ. ಆದರೆ ಕಳೆದ ಹನ್ನೊಂದು ವರ್ಷಗಳಿಂದ ಇಬ್ಬರೂ ಪರಸ್ಪರ ಮಾತಿಗೆ ಸಿಕ್ಕಿದ್ದೇ ಇಲ್ಲ. ಇದೀಗ ಅಕ್ಷಯಕುಮಾರನಿಂದಾಗಿ ಆಗಿರುವ ಈ ಮಹಾ 'ಎಡವಟ್ಟ'ನ್ನು ಡಾ. ಸ್ವಪ್ನ ತನ್ನ ಎದೆಯೊಳಗೆ ಹುದುಗಿಸಿಕೊಂಡು, ಬಾಲ್ಯದ ಸಲಿಗೆಯಲ್ಲಿ ಆತನ ತಲೆಗೆ ಮೊಟಕಿ, ಆತನೊಳಗಿನ ಅಪರಾಧಿ ಪ್ರಜ್ಞೆ ಅಥವಾ ಕೀಳರಿಮೆಯನ್ನು ಸ್ವಲ್ಪ ಹಗುರಗೊಳಿಸಿಬಿಟ್ಟಿದ್ದಳು. ಆಕೆಯ ಸ್ವಭಾವವೇ ಹಾಗೇ—ಮೊದಲು ಮನುಷ್ಯಳಾಗುವುದು.

ವೈದ್ಯೆಯಾಗಿ ಅದು ಆಕೆಯ ಕರ್ತವ್ಯವೂ ಕೂಡಾ. ...ಇತ್ತ ಆಸ್ಪತ್ರೆಯ ಸ್ಪೆಷಲ್‌ವಾರ್ಡ್‌ನ ಶುಭ್ರ ಮಂಚದಲ್ಲಿ ಗೋಡೆಯತ್ತ ಮುಖ ಮಾಡಿದ ಮಲಗಿದ್ದ ಕೌಶಿಕನನ್ನು, ತನ್ನ ಎರಡೂ ಕೈಗಳಿಂದ ಬೆಕ್ಕಿನ ಮರಿಯಂತೆ ಎತ್ತುಕೊಂಡ ಸ್ವಪ್ನ, ಆತನನ್ನು ತನ್ನ ತೊಡೆಯ ಮೇಲೆ ಕೂರಿಸಿಕೊಂಡು, ಬಂಡೀಪುರದ ಹುಲಿಗಳ ಬಗ್ಗೆಯೇ ಅದೂ... ಇದೂ... ಇಲ್ಲದ 'ಕತೆ'ಗಳನ್ನು ಹೇಳುತ್ತಾ... ತಾನೀಗ ಕೌಶಿಕನಿಗೆ 'ಪಾರಿವಾಳ ಮತ್ತು ಇರುವೆ'ಯ ಕತೆಯೊಂದನ್ನು ಹೇಳಲಿದ್ದೇನೆ ಎಂದು ತನ್ನ ಸುತ್ತಲು ನೆರೆದವರೆದುರು ಹೇಳಿಕೊಂಡಳಲ್ಲದೆ ಕತೆಯನ್ನು ಆರಂಭಿಸಿಯೇ ಬಿಟ್ಟಳು. ಆಕೆ ತನ್ನ ಕತೆಯನ್ನು ಶುರು ಮಾಡಿದೊಡನೆ, ಮಗು ಹೂ... ಅರಳುವಷ್ಟೇ ನಿಧಾನಕ್ಕೆ ತನ್ನ ಕತ್ತನ್ನು ಹೊರಳಿಸಿ, ತನ್ನ ಪ್ರೀತಿಯ ಅಜ್ಜ ರಾಮಯ್ಯಾಳ್ವರನ್ನು ದಿಟ್ಟಿಸಿತ್ತು. ಆದರೆ ಮಗುವಿನ ಆ ಕಣ್ಣದಿಟ್ಟಿಯಲ್ಲಿ ವಿಶ್ವಾಸದ ಅಥವಾ ಪ್ರೀತಿಯ ಯಾವುದೇ ಪಸೆ ಕಾಣದಾದಾಗ, ದಿಢೀರನೆ ಅಜ್ಜಯ್ಯನ ಕಣ್ಣಲ್ಲಿ ನೀರು ತುಂಬಿ ತುಳುಕತೊಡಗಿದ್ದನ್ನು ಕಂಡ ಸ್ವಪ್ನ ಕಣ್ಸನ್ನೆಯಲ್ಲೇ ಅವರನ್ನು ಸುಮ್ಮನಿರಿಸಿದ್ದಳು.